ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ , ನ್ಯಾಯಾಧೀಶರವರ ನ್ಯಾಯಾಲಯ

ಚನ್ನಗಿರಿ .

ಸಿಸಿ ನಂ. **66/2021**

ಹೆಸರುಃ  ದೇವೇಂದ್ರಪ್ಪ                                                    ಚಾಸಾಃ 17

ತಂದೆಃ ಬಸಪ್ಪ                                                    ಫ್ರಾಸಾ: 4

ವಯಸ್ಸುಃ  68

ಉದ್ಯೋಗಃ ನಿವೃತ್ತಿದಾರ

ವಾಸ ಸ್ಥಳಃ ಬೆಂಗಳೂರು

ಸಾಕ್ಷಿಗೆ ದಿನಾಂಕಃ 04-03-2023 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಸಾಕ್ಷಿ ಅನಾರೋಗ್ಯದ ಕಾರಣಕ್ಕಾಗಿ ನ್ಯಾಯಾಲಯದಲ್ಲಿ ಪ್ರತ್ಯಕ್ಷವಾಗಿ ಸಾಕ್ಷ್ಯವನ್ನು ನುಡಿಯಲಾಗುವುದಿಲ್ಲ ಎಂದು  ತನ್ನ ವಾಟ್ಸ್ ಅಪ್ ದೃಶ್ಯ ಸಮ್ಮೇಳನದ ಮೂಲಕ ಹಾಜರಾಗಿ ಸಾಕ್ಷ್ಯವನು ನುಡಿದಿರುತ್ತಾರೆ. ( ಸಾಕ್ಷಿ  ವಾಟ್ಸ್ ಅಪ್ ಸಂ. 9902510716)

**ದಂ.ಪ್ರ.ಕ್ರಿ.ಸಂ. ಕಲಂ 299 ರಡಿಯಲ್ಲಿ**

**ಮುಖ್ಯ ವಿಚಾರಣೆಃ** ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ದಿಃ 30.01.2014 ರಿಂದ 07.03.2014 ರವರೆಗೆ ಬಸವಪಟ್ಟಣ ಪೊಲೀಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 22.02.2014 ರಂದು ನಾನು ಠಾಣಾ ಪ್ರಭಾರದಲ್ಲಿದ್ದಾಗ ಚಾಸಾ 1 ರವರು ಠಾಣೆಗೆ ಹಾಜರಾಗಿ ದೂರನ್ನು ನೀಡಿದ್ದು ಅದನ್ನು ಠಾಣಾ ಗುನ್ನೆ ಸಂ.23/2014 ರಂತೆ ಪ್ರಕರಣವನ್ನು ದಾಖಲಿಸಿ ಪ್ರ.ವ.ವರದಿಯನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ, ದೂರಿನ ಮೇಲಿನ ಸಾಕ್ಷಿ ಸಹಿಯನ್ನು ನಿಪಿ 1 ಸಿ ಎಂದು, ಪ್ರ ವ. ವರದಿಯನ್ನು ನಿಪಿ 5 ಎಂದು ಗುರುತಿಸಲಾಯಿತು. ಅದೇ ದಿನ ದಾವಣಗೆರೆ ಎಸ್ ಎಸ್ ಆಸ್ಪತ್ರೆಯಲ್ಲಿದ್ದ ಶವದ  ಮಹಜರ್ ನ್ನು ಜರುಗಿಸಿರುತ್ತೇನೆ. ಶವ ಮಹಜರ್ ನ್ನು ಬೆಳಗ್ಗೆ 9.00 ರಿಂದ 11.00 ರವರೆಗೆ ಪಂಚರ ಸಮ್ಮುಖದಲ್ಲಿ ಜರುಗಿಸಿರುತ್ತೇನೆ ಮತ್ತು ಮೃತರ ಸಂಬಂದಿಕರಾದ ಚಾಸಾ 4 ರಿಂದ 7 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ಸದರಿ ಮಹಜರ್ ನ್ನು ನಿಪಿ 6 ಎಂದು ಗುರುತಿಸಲಾಯಿತು.  ಅದೇ ದಿನ  ಪಿರ್ಯಾದಿ ತೋರಿಸಿದ ಅಪರಾದ ಸ್ಥಳದ ಮಹಜರ್ ನ್ನು ಪಂಚರ ಸಮಕ್ಷಮ ಜರುಗಿಸಿರುತ್ತೇನೆ. ಸದರಿ ಮಹಜರ್ ನ ಮೇಲಿನ ಸಾಕ್ಷಿ ಸಹಿಯನ್ನು ನಿಪಿ 2 ಬಿ ಎಂದು

ಗುರುತಿಸಲಾಯಿತು. ಆ ಕಾಲಕ್ಕೆ ಸ್ಥಳದ ನಕಾಶೆಯನ್ನು ತಯಾರಿಸಿರುತ್ತೇನೆ. ಸದರಿ ನಕಾಶೆಯನ್ನು ನಿಪಿ 7 ಎಂದು ಗುರುತಿಸಲಾಯಿತು.

ದಿಃ 24.02.2014 ರಂದು ಚಾಸಾ 12 ರವರು ಹಾಜರುಪಡಿಸಿದ ವಾಹನ ತಡೆ ಮಹಜರ್ ನ್ನು ಪಂಚರ ಸಮಕ್ಷಮ ಜರುಗಿಸಿರುತ್ತೇನೆ. ಸದರಿ ಮಹಜರ್ ನ್ನು ನಿಪಿ 8 ಸಾಕ್ಷಿಯ ಸಹಿಯನ್ನು ನಿಪಿ 8 ಎ ಎಂದು ಗುರುತಿಸಲಾಯಿತು. ಚಾಸಾ 12 ರವರ ಹೇಳಿಕೆಯನ್ನು ಪಡೆದಿರುತ್ತೇನೆ.

ವಾಹನ ಮಾಲು ಪಟ್ಟಿ ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿರುತ್ತೇನೆ. ಮುಂದಿನ ತನಿಖೆಗಾಗಿ ಪ್ರಕರಣದ ಕಡತವನ್ನು ಚಾಸಾ 18 ರವರಿಗೆ ವರ್ಗಾಯಿಸಿರುತ್ತೇನೆ.

**ಮರು ವಿಚಾರಣೆ ಇಲ್ಲ.**

( **ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.**)

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ,**
**ಚನ್ನಗಿರಿ.**